ಉಪ ಮುಖ್ಯಮಂತ್ರಿಗಳಿದ್ದೀರಿ, ನೇರವಾಗಿ ಆಡಳಿತ ನಡೆಸುತ್ತಿದ್ದೀರಿ, ಯಾರ ಮುಲಾಜು ಇಲ್ಲದೆ ನಡೆಸುತ್ತಿದ್ದೀರಿ, ನಿಮಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಅದಕ್ಕಾಗೇ ನಾನು ಕೇಳುತ್ತಿರುವುದು, ಇಂತಹ ಒಂದು ಸಂಸ್ಥೆ ಬಗ್ಗೆ ನೀವು ತನಿಖೆ ಮಾಡಿದರೆ ಸಾವಿರಾರು ಕೋಟಿ ರೂಪಾಯಿ ಹಣ ರಾಜ್ಯ ಸರ್ಕಾರದ ಬೊಕ್ಕಸಕ್ಕೂ ಬರುತ್ತದೆ. ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಕಠಿಣ ಕ್ರಮವನ್ನೂ ತೆಗೆದುಕೊಂಡರು ಅಂತ ಒಂದು ಮೆಸೇಜು ರಾಜ್ಯಕ್ಕೆ ಹೋಗುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ತನಿಖೆ ನಡೆಸುವುದಕ್ಕೆ ಒಂದು ಪ್ರಯತ್ನ ತಾವು ಮಾಡುತ್ತೀರಾ?

ಶ್ರೀ ಸಿದ್ಧರಾಮಯ್ಯ: ಸಾರಾಸಗಟಾಗಿ ವಿಚಾರಣೆ ಮಾಡುವುದಕ್ಕಾಗುವುದಿಲ್ಲ. ನಿರ್ದಿಷ್ಟವಾದಂತೆ ಪ್ರಕರಣಗಳನ್ನು ನಾನು ನೋಡುತ್ತೇನೆ. ರಿವ್ಯೂ ಕೊಡಿಸಿ ನೀವು ಹೇಳುವಂತೆ ಸಂಸ್ಥೆಗೆ ನಷ್ಟವಾಗುವಂತೆ ಯಾರಾದರೂ ಅಧಿಕಾರಿಗಳು ನಡೆದುಕೊಂಡಿದ್ದರೆ ಅಂತಹ ಪ್ರಕರಣಗಳಲ್ಲಿ ತನಿಖೆ ಮಾಡಿಸಿ ಕ್ರಮ ಕೈಗೊಳ್ಳುತ್ತೇನೆ.

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ

206 (2295) ಶ್ರೀ ಬಸವರಾಜ್ ರಾಯರೆಡ್ಡಿ: ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2005ನೇ ಜನವರಿವರೆಗೆ ಎಷ್ಟು ಮೆಗಾವ್ಯಾಟ್‌ಗಳಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲಾಗುತ್ತಿದೆ ಹಾಗೂ ಯಾವ ಯಾವ ಮೂಲಗಳಿಂದ ಎಷ್ಟು ಮೆಗಾವ್ಯಾಟ್ ಉತ್ಪಾದನೆ ಮಾಡಲಾಗುತ್ತಿದೆ;

ಆ) ಕೇಂದ್ರ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ವಿದ್ಯುತ್ತಿನ ಪಾಲೆಷ್ಟು; ಹಾಗೂ ರಾಜ್ಯ ಸರ್ಕಾರದಿಂದ ಇದಕ್ಕೆ ತಗಲುವ ವೆಚ್ಚವೆಷ್ಟು;

ಇ) ಯಾವ ಯಾವ ಮೂಲಗಳಿಂದ ಉತ್ಪಾದನೆಯಾಗುತ್ತಿದೆ;

ಈ) ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ್ನು ಖಾಸಗಿ ವಲಯದಿಂದ ಪಡೆಯಲಾಗುತ್ತಿದೆಯೆ;

ಉ) ಹಾಗಿದ್ದಲ್ಲಿ, ಯಾವ ಯಾವ ಖಾಸಗಿ ಕಂಪನಿಗಳಿಂದ ಪಡೆಯಲಾಗುತ್ತಿದೆ ಹಾಗೂ ಪ್ರತಿ ಯೂನಿಟ್‌ಗೆ ನೀಡುತ್ತಿರುವ ಹಣವೆಷ್ಟು;

ಊ) ರಾಜ್ಯದಲ್ಲಿ ಕೃಷಿ, ಕೈಗಾರಿಕೆ, ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆದಾರರಿಗೆ ಎಷ್ಟು ವಿದ್ಯುತ್ ಅವಶ್ಯವಿದೆ ಹಾಗೂ ವಿದ್ಯುತ್‌ನ ಕೊರತೆ ಇದ್ದಲ್ಲಿ ಹೆಚ್ಚುವರಿ ಉತ್ಪಾದನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಋ) ಕೊರತೆಯಿರುವ ವಿದ್ಯುತ್ತನ್ನು ಸರಿದೂಗಿಸಲು ಹೆಚ್ಚುವರಿ ಉತ್ಪಾದನೆಗೆ ಖರ್ಚಾಗುವ ಹಣವೆಷ್ಟು ಹಾಗೂ ವಿದ್ಯುತ್ ಉತ್ಪಾದಿಸಲು ಯೋಜಿಸಿರುವ ಮೂಲಗಳಾವುವು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ರಾಜ್ಯದಲ್ಲಿ 2005ನೇ ಜನವರಿವರೆಗೆ ಒಟ್ಟು 6100.43 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಇರುತ್ತದೆ. ಮೂಲವಾರು ಉತ್ಪಾದನಾ ಕೇಂದ್ರವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಿದೆ. ಅಲ್ಲದೇ, ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ಸುಮಾರು 1070 ಮೆ.ವ್ಯಾ. ವಿದ್ಯುತ್ ಲಭ್ಯವಿದೆ. ಇದನ್ನು ಪರಿಗಣಿಸಿದಲ್ಲಿ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯ 7170.435 ಮೆ.ವ್ಯಾ. ಆಗುತ್ತದೆ.

ಆ) ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ಪ್ರಸಕ್ತ ವರ್ಷವಾದ 2004–05ರ ಸಾಲಿನಲ್ಲಿ ಜನವರಿ 2005ರ ಅಂತ್ಯದವರೆಗೆ ಒಟ್ಟು 9276 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ರಾಜ್ಯದ ಪಾಲಾಗಿ ಪಡೆಯಲಾಗಿದೆ. ಇದಕ್ಕಾಗಿ 1640.16 ಕೋಟಿ ರೂ.ಗಳ ವೆಚ್ಚ ತಗಲಿರುತ್ತದೆ.

ಇ) ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಯೋಜನೆಗಳ ಮೂಲವಾರು ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಿದೆ.

ಈ) ಹೌದು.

ಉ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ ಪೂರೈಕೆ ಮಾಡುತ್ತಿರುವ ಖಾಸಗೀ ಕಂಪನಿಗಳ ಹೆಸರುಗಳು ಮತ್ತು ಪ್ರತಿ ಯೂನಿಟ್ಟಿಗೆ ನೀಡುತ್ತಿರುವ ದರಗಳ ವಿವರಗಳನ್ನು ಅನುಬಂಧ–3 ರಲ್ಲಿ ಒದಗಿಸಿದೆ.

ಊ) ಪ್ರಸ್ತುತ ರಾಜ್ಯದಲ್ಲಿ ಕೃಷಿ, ಕೈಗಾರಿಕೆ, ಗೃಹಬಳಕೆ ಹಾಗೂ ವಾಣಿಜ್ಯ ಬಳಕೆದಾರರಿಗೆ ಅವಶ್ಯವಿರುವ ವಿದ್ಯುತ್ತಿನ ಪ್ರಮಾಣಗಳ ವಿವರಗಳು ಕೆಳಕಂಡಂತಿವೆ:–

ಕ್ರ.ಸಂ.	ವಿವರ	ಅವಶ್ಯವಿರುವ ವಿದ್ಯುತ್ತಿನ ಪ್ರಮಾಣ (ದಶ ಲಕ್ಷ ಯೂನಿಟ್ಟುಗಳಲ್ಲಿ)
1	ಕೃಷಿ	10,879
2	ಕೈಗಾರಿಕೆ	8,354
3	ಗೃಹ ಬಳಕೆ	4,982
4	ವಾಣಿಜ್ಯ ಬಳಕೆ	1,196
	ಒಟ್ಟು	**25,411**

ರಾಜ್ಯವು ವಿದ್ಯುತ್ತಿನ ಕೊರತೆಯನ್ನು ಎದುರಿಸುತ್ತಿದೆ. ಹೆಚ್ಚುವರಿ ವಿದ್ಯುತ್ ಉತ್ಪಾದನೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1. ಆಲಮಟ್ಟಿ ಜಲ ವಿದ್ಯುತ್ ಉತ್ಪಾದನಾ ಯೋಜನೆಯಲ್ಲಿ 55 ಮೆ.ವ್ಯಾ. ಸಾಮರ್ಥ್ಯದ 3ನೇ ಘಟಕವನ್ನು 13.1.2005 ರಂದು ಕಾರ್ಯಾರಂಭ ಮಾಡಿದೆ.

ತಲಾ 55 ಮೆ.ವ್ಯಾ. ಸಾಮರ್ಥ್ಯದ ಉಳಿದ 3 ಘಟಕಗಳು ಜುಲೈ 2005ರ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡಲಿದೆ.

2. 2,500 ಮೆ.ವ್ಯಾ. ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯು ಭರದಿಂದ ಸಾಗುತ್ತಿದೆ.

3. ಬಡದಿ ವಿದ್ಯುತ್ ಘಟಕ, ನಾಗಝರಿ ವಿದ್ಯುದಗಾರ ಆಧುನೀಕರಣ ಮತ್ತು ನವೀಕರಣ ಮತ್ತು ಗುಂಡ್ಯ ಜಲ ವಿದ್ಯುತ್ ಯೋಜನೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

4. ವರಾಹಿ ಜಲ ವಿದ್ಯುತ್ ಯೋಜನೆಯ 2ನೇ ಹಚಿತರದ ಕಾಮಗಾರಿಯು ಶೀಘ್ರದಲ್ಲಿ ಆರಂಭವಾಗಲಿದೆ. ಮೇಲ್ಕಂಡ ಎಲ್ಲಾ ಯೋಜನೆಗಳು ಪೂರ್ಣಗೊಂಡ ನಂತರ ರಾಜ್ಯದ ವಿದ್ಯುತ್ ಉತ್ಪಾದನಾ ವ್ಯವಸ್ಥೆಗೆ 3475 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮಾರ್ಥ್ಯ ಹೆಚ್ಚುವರಿಯಾಗಿ ಸೇರ್ಪಡೆಯಾಗುತ್ತದೆ.

5. ಖಾಸಗೀ ವಲಯದಲ್ಲಿ ನಾಗಾರ್ಜುನ ಪವರ್ ಕಾರ್ಪೋರೇಷನ್ ಕಂಪನಿ ಸಂಸ್ಥೆಯು 1015 ಮೆ.ವ್ಯಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಇರುತ್ತದೆ. ಅಲ್ಲದೇ ಅಸಂಪ್ರದಾಯ ಇಂಧನ ಮೂಲಗಳಿಂದಲೂ ಸುಮಾರು 150 ಮೆ.ವ್ಯಾ. ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುವ ನಿರೀಕ್ಷೆ ಇದೆ.

ಖು) ಕರ್ನಾಟಕ ವಿದ್ಯುತ್ ನಿಗಮವು 6838 ಕೋಟಿ ರೂ.ಗಳ ವೆಚ್ಚದೊಂದಿಗೆ 2465 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಅಲ್ಲದೇ, 5042 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಸುಮಾರು 1710 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ವಿದ್ಯುತ್ ಉತ್ಪಾದಿಸಲು ಯೋಜಿಸಿರುವ ಮೂಲಗಳ ವಿವರಗಳು ಈ ಕೆಳಕಂಡಂತಿವೆ.

		ಮೆ. ವ್ಯಾ. ಗಳಲ್ಲಿ
1	ಜಲ ವಿದ್ಯುತ್	865
2	ಶಾಖೋತ್ಪನ್ನ	1210
3	ಕಂಬೈನ್ಡ್ ಸೈಕಲ್ ಗ್ಯಾಸ್ ಪ್ಲಾಂಟ್	2100
	ಒಟ್ಟು	4175

ಅನುಬಂಧ-1

31-1-2005 ರಲ್ಲಿದ್ದಂತೆ ರಾಜ್ಯದಲ್ಲಿನ ಜಲವಿದ್ಯುತ್ ಉತ್ಪಾದನ ಕೇಂದ್ರಗಳ ಸ್ಥಾಪಿತ ಸಾಮರ್ಥ್ಯದ ವಿವರ

ಕ್ರಮ ಸಂಖ್ಯೆ	ವಿದ್ಯುತ್ ಉತ್ಪಾದನಾ ಘಟಕದ ಹೆಸರು	ಮೂಲ	ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾಟ್‌ಗಳಲ್ಲಿ)
(ಅ)	ಕೆ.ಪಿ.ಸಿ.ಎಲ್.		
1	ಶರಾವತಿ	ಜಲವಿದ್ಯುತ್	1035.00
2	ಲಿಂಗನಮಕ್ಕಿ	ಜಲವಿದ್ಯುತ್	55.00
3	ಗೇರುಸೊಪ್ಪ	ಜಲವಿದ್ಯುತ್	240.00
4	ನಾಗಝರಿ	ಜಲವಿದ್ಯುತ್	855.00
5	ಸೂಪ	ಜಲವಿದ್ಯುತ್	100.00
6	ಘಟಪ್ರಭ	ಜಲವಿದ್ಯುತ್	32.00
7	ವರಾಹಿ	ಜಲವಿದ್ಯುತ್	230.00
8	ಮಾಣಿ	ಜಲವಿದ್ಯುತ್	9.00
9	ಭದ್ರಾ	ಜಲವಿದ್ಯುತ್	39.20
10	ಕದ್ರಾ	ಜಲವಿದ್ಯುತ್	150.00
11	ಕೊಡಸಳ್ಳಿ	ಜಲವಿದ್ಯುತ್	120.00
12	ಕಲ್ಲಲ	ಜಲವಿದ್ಯುತ್	0.40
13	ಸಿರವಾರ	ಜಲವಿದ್ಯುತ್	1.00
14	ಗಣೇಕಲ್	ಜಲವಿದ್ಯುತ್	0.35
15	ಮಲ್ಲಾಪುರ	ಜಲವಿದ್ಯುತ್	9.00
16	ಆಲಮಟ್ಟಿ	ಜಲವಿದ್ಯುತ್	125.00
17	ಕೆರಗೋಡು	ಜಲವಿದ್ಯುತ್	0.04
	ಒಟ್ಟು-ಜಲವಿದ್ಯುತ್		**3000.99**
(ಆ)	ಆರ್.ಟಿ.ಪಿ.ಎಸ್, ರಾಯಚೂರು	ಶಾಖೋತ್ಪನ್ನ	1470.00
(ಇ)	ಕಪ್ಪದಗುಡ್ಡ	ಗಾಳಿ ಆಧಾರಿತ	4.555
	ಒಟ್ಟು-ಕೆ.ಪಿ.ಸಿ.ಎಲ್.		**4,475.545**
(ಈ)	ಐ.ಪಿ.ಎನ್.ಎಲ್.		
1.	ಎಂ.ಜಿ.ಹೆಚ್.ಇ., ಜೋಗ್	ಜಲವಿದ್ಯುತ್	139.20
2	ಶಿವನಸಮುದ್ರ	ಜಲವಿದ್ಯುತ್	42.00

ಕ್ರಮ ಸಂಖ್ಯೆ	ವಿದ್ಯುತ್ ಉತ್ಪಾದನಾ ಘಟಕದ ಹೆಸರು	ಮೂಲ	ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾಟ್‌ಗಳಲ್ಲಿ)
3	ಶಿಂಷಾಪುರ	ಜಲವಿದ್ಯುತ್	17.20
4	ಮುನಿರಾಬಾದ್	ಜಲವಿದ್ಯುತ್	28.00
5	ಟಿ.ಬಿ. ಡ್ಯಾಂ ಪಾಲು	ಜಲವಿದ್ಯುತ್	14.40
	ಒಟ್ಟು–ವಿ.ವಿ.ಎನ್.ಎಲ್ (ಜಲ)		**240.80**
(ಊ)	ಯಲಹಂಕ	ಡೀಸಲ್	127.92
	ಒಟ್ಟು–ವಿ.ವಿ.ಎನ್.ಎಲ್.		368.72
(ಊ)	ಸಂಪ್ರದಾಯಕ ಸ್ವತಂತ್ರ ವಿದ್ಯುತ್ ಉತ್ಪಾದಕರು		
1	ತಣ್ಣೀರುಬಾವಿ	ಶಾಖೋತ್ಪನ್ನ	220.00
2	ರಾಯಲಸೀಮಾ	ಶಾಖೋತ್ಪನ್ನ	27.80
3	ಟಾಟಾ ಪವರ್ ಕಂಪನಿ	ಶಾಖೋತ್ಪನ್ನ	81.30
4	ಜಿಂದಾಲ್	ಶಾಖೋತ್ಪನ್ನ	260.00
	ಒಟ್ಟು–ಸ್ವತಂತ್ರ ವಿದ್ಯುತ್ ಉತ್ಪಾದಕರು		**589.10**
(ಋ)	ಅಸಂಪ್ರದಾಯ ಮೂಲಕ ಸ್ವತಂತ್ರ ವಿದ್ಯುತ್ ಉತ್ಪಾದಕರು		
1	ಕೋಜನರೇಷನ್		264.50
2	ಗಾಳಿ ಆಧಾರಿತ		218.29
3	ಕಿರುಜಲ		132.98
4	ಬಯೋಮಾಸ್		51.30
	ಒಟ್ಟು		**667.07**
(ಋೂ)	ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳು:		ರಾಜ್ಯದ ಪಾಲು
1	ಎನ್.ಟಿ.ಸಿ., ರಾಮಗುಂಡಂ	ಶಾಖೋತ್ಪನ್ನ	345.00
2	ಎನ್.ಎಲ್.ಸಿ.–1	ಶಾಖೋತ್ಪನ್ನ	84.00
3	ಎನ್.ಎಲ್.ಸಿ.–2	ಶಾಖೋತ್ಪನ್ನ	115.00
4	ಮದ್ರಾಸ್ ಅಣು ವಿದ್ಯುತ್ ಕೇಂದ್ರ	ಅನು ವಿದ್ಯುತ್	21.09
5	ಕೈಗಾ ಅನು ವಿದ್ಯುತ್ ಕೇಂದ್ರ	ಅನು ವಿದ್ಯುತ್	108.00

ಕ್ರಮ ಸಂಖ್ಯೆ	ವಿದ್ಯುತ್ ಉತ್ಪಾದನಾ ಘಟಕದ ಹೆಸರು	ಮೂಲ	ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾಟ್‌ಗಳಲ್ಲಿ)
6	ಎನ್.ಎಲ್.ಸಿ. (ವಿಸ್ತರಣೆ)	ಶಾಖೋತ್ಪನ್ನ	100.00
7	ಎನ್.ಟಿ.ಪಿ.ಎಸ್. ತಲ್ಚೇರ್	ಶಾಖೋತ್ಪನ್ನ	297.00
	ಒಟ್ಟು		**1070.00**
	ಒಟ್ಟು ಮೊತ್ತ		**7170.435**

ಅನುಬಂಧ–2

ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ವಿದ್ಯುತ್ ಯೋಜನೆಗಳ ಹೆಸರು ಮತ್ತು ಮೂಲಗಳ ವಿವರಗಳು

ಕ್ರಮ ಸಂಖ್ಯೆ	ವಿದ್ಯುತ್ ಉತ್ಪಾದನಾ ಯೋಜನೆಯ ಹೆಸರು	ಮೂಲ	ರಾಜ್ಯದ ಶೇಕಡಾ ಪಾಲು (ಹಂಚಿಕೆ ಆಗದೇ ಇರುವುದು ಸೇರಿದಂತೆ)
1	ಎನ್.ಟಿ.ಪಿ.ಸಿ ರಾಮಗುಂಡಂ	ಶಾಖೋತ್ಪನ್ನ	19.84
2	ಎನ್.ಟಿ.ಪಿ.ಸಿ.ಎಲ್. ತಾಲ್ಚೇರ್	ಶಾಖೋತ್ಪನ್ನ	23.98
3	ಮದ್ರಾಸ್ ಅಣು ವಿದ್ಯುತ್ ಕೇಂದ್ರ	ಅಣು ವಿದ್ಯುತ್	7.64
4	ಕೈಗಾ ಅಣು ವಿದ್ಯುತ್ ಕೇಂದ್ರ	ಅಣು ವಿದ್ಯುತ್	29.89
5	ನೈವೇಲಿ 2–ಹಂತ 1	ಶಾಖೋತ್ಪನ್ನ	23.09
6	ನೈವೇಲಿ 2–ಹಂತ 2	ಶಾಖೋತ್ಪನ್ನ	23.32
7	ನೈವೇಲಿ 1–ವಿಸ್ತರಣೆ	ಶಾಖೋತ್ಪನ್ನ	27.25

ಅನುಬಂಧ–3

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಪೂರೈಕೆ ಮಾಡುತ್ತಿರುವ ಖಾಸಗೀ ಸಂಸ್ಥೆಗಳ ಹೆಸರುಗಳು ಮತ್ತು ಪ್ರತಿ ಯೂನಿಟ್ ವಿದ್ಯುತ್ತಿಗೆ ನೀಡುತ್ತಿರುವ ದರದ ವಿವರಗಳು

ಕ್ರ. ಸಂ.	ಕಂಪನಿಯ ಹೆಸರು	ಖರೀದಿ ದರ ಪ್ರತಿ ಯೂನಿಟ್ಟಿಗೆ (ರೂ.ಗಳಲ್ಲಿ)
1	2	3
ಅ)	**ಪ್ರಮುಖ ಖಾಸಗಿ ವಿದ್ಯುತ್ ಉತ್ಪಾದಕರುಗಳು:**	
1	ತಣ್ಣೀರುಬಾವಿ	5.27
2	ಟಾಟಾ ಕಂಪನಿ	4.56

1	2	3
3	ರಾಯಲ ಸೀಮ ಅಲ್ಕಾಲೈಸ್	4.925
4	ಜಿಂದಾಲ್	3.1606
ಆ)	**ಸಹ ವಿದ್ಯುತ್ ಉತ್ಪಾದನೆ ಯೋಜನೆಗಳು**	
1	ಬನ್ನಾರಿ ಅಮ್ಮನ್ ಷುಗರ್ಸ್	3.32
2	ಜೆಮ್ ಷುಗರ್ಸ್ ಲಿಮಿಟೆಡ್	3.32
3	ಗೋದಾವರಿ ಷುಗರ್ಸ್ ಲಿಮಿಟೆಡ್	3.32
4	ಐ.ಸಿ.ಎಲ್. ಷುಗರ್ಸ್ ಲಿಮಿಟೆಡ್	3.32
5	ಜಮಖಂಡಿ ಷುಗರ್ಸ್ ಲಿಮಿಟೆಡ್	3.32
6	ಪ್ರಭುಲಿಂಗೇಶ್ವರ ಷುಗರ್ಸ್ ಲಿಮಿಟೆಡ್	3.32
7	ರೈತರ್ ಎಸ್.ಎಸ್.ಕೆ. ನಿಯಮಿ	3.32
8	ರೇಣುಕಾ ಷುಗರ್ಸ್ ಲಿಮಿಟೆಡ್	3.32
9	ಶಾಮನೂರ್ ಷುಗರ್ಸ್ ಲಿಮಿಟೆಡ್	3.32
10	ಉಗಾರ್ ಷುಗರ್ಸ್ ಲಿಮಿಟೆಡ್	3.32
11	ದಾವಣಗೆರೆ ಷುಗರ್ ಕಂಪನಿ	2.80
12	ದೂದಗಂಗ ಸಹಕಾರಿ ಸಕ್ಕರೆ ಕಾರ್ಖಾನೆ	2.80
13	ಎಸ್.ಸಿ.ಎಂ. ಷುಗರ್ಸ್	2.80
ಇ)	**ಕಿರು ಜಲ ವಿದ್ಯುತ್ ಯೋಜನೆಗಳು**	
1	ಅಮೋಘ ಪವರ್ ಪ್ರಾಜೆಕ್ಟ್	3.32
2	ಏಟ್ರಿಯ (ಶಿವಾ ಮತ್ತು ಶಿಂಷಾ)	2.9
3	ಬೋರುಕಾ ಪಿ.ಸಿ.ಎಲ್. (ಎಂ.ಎಂ. ಮತ್ತು ಆರ್.ಕೆ.)	3.32 ಮತ್ತು 2.90
4	ಐಡಿಸಿಎಲ್ (ಹಾರಂಗಿ ಎಂ.ಎಚ್.ಎಸ್.)	2.90
5	ಮೂಡ ಬಾಗಿಲು ಪವರ್ ಪ್ರಾಜೆಕ್ಟ್	3.32
6	ಎಂ.ಪಿ.ಸಿ.ಎಲ್. (ನಾರಾಯಣಪುರ ಎಲ್.ಬಿ.ಸಿ.)	2.9
7	ಸ್ಕಿಯೋರ್ (ಹೇಮಾವತಿ ಎಲ್.ಬಿ.ಸಿ. ಎಂ.ಹೆಚ್.ಎಸ್.)	2.9
8	ಟಿ.ಎಸ್.ಪಿ. ಲಿಮಿಟೆಡ್ (ಮಲಪ್ರಭಾ ಎಂ.ಹೆಚ್.ಎಸ್.)	2.9
9	ವಿಜಯಲಕ್ಷ್ಮಿ ಹೈಡ್ರೋ	3.32
10	ಗ್ರಾಫೈಟ್ ಇಂಡಿಯಾ ಲಿಮಿಟೆಡ್, (ಶ್ರೀರಂಗಪಟ್ಟಣ)	2.9
11	ಕಾಲ್ಟನ್ ಪವರ್ ಟೆಕ್ನಿಕಲ್ ಪ್ರೈವೇಟ್ ಲಿಮಿಟೆಡ್	3.32

12	ಮಾರುತಿ ಪವರ್ ಜನರೇಷನ್ (1) ಪ್ರೈವೇಟ್ ಲಿಮಿಟೆಡ್ (ಹಾರಂಗಿ)	3.32
13	ಸುಭಾಸ್ ಕಬಿನಿ ಪವರ್	2.9
14	ಇಂಟರ್ ನ್ಯಾಷನಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್	2.9
15	ಭೋರುಕ (ಷಹಪೂರ–ಡಿ9)	2.9
16	ಮಾರುತಿ ಪವರ್ ಜೆನ್ (ಹೇಮಾವತಿ)	2.9
17	ಆರ್.ಕೆ. ಪವರ್ ಜೆನ್ ಪ್ರೈವೇಟ್ ಲಿಮಿಟೆಡ್	2.8
18	ಕೊಪ್ಪಳ ಗ್ರೀನ್ ಪವರ್ ಲಿಮಿಟೆಡ್	2.8
19	ಶ್ರೀ ಇಂದ್ರಾ ಪವರ್ ಎನರ್ಜಿಸ್	2.8
20	ಪವರಾನಿಕ್ಸ್ ಲಿಮಿಟೆಡ್	2.8
ಈ)	**ಗಾಳಿ ಆಧಾರಿತ ವಿದ್ಯುತ್ ಯೋಜನೆಗಳು**	
1	ರಿಲೈಯನ್ಸ್ ಎನರ್ಜಿ ಲಿಮಿಟೆಡ್, (ವಿಎಸ್ಇಎಸ್)–1	3.32
2	ರಿಲೈಯನ್ಸ್ ಎನರ್ಜಿ ಲಿಮಿಟೆಡ್, (ವಿಎಸ್ಇಎಸ್)–2	3.25
3	ಸೆಮ್ಕೋ ಇಂಡಸ್ಟ್ರೀಸ್ ಲಿಮಿಟೆಡ್–1	3.32
4	ಸೆಮ್ಕೋ ಇಂಡಸ್ಟ್ರೀಸ್ ಲಿಮಿಟೆಡ್–2	3.162
5	ಎನಾರ್ಕಾನ್ ವಿಂಡ್ ಫಾರ್ಮ್ ಲಿಮಿಟೆಡ್	3.32
6	ಎನಾರ್ಕಾನ್ ಕರ್ನಾಟಕ ಲಿಮಿಟೆಡ್	3.32
7	ಟೋಪಜ್ ಇನ್ವೆಸ್ಟ್ಮೆಂಟ್ಸ್–1	3.16
8	ಟೋಪಜ್ ಇನ್ವೆಸ್ಟ್ಮೆಂಟ್ಸ್–2	3.162
9	ಎನ್.ಎಸ್.ಎಲ್–1 ಮತ್ತು 4 (6.75 ಮೆ.ವ್ಯಾ.)	3.32
10	ಎನ್.ಎಸ್.ಎಲ್–2 ಮತ್ತು 3 (10.5 ಮೆ.ವ್ಯಾ.)	3.25
11	ಎನ್.ಎಸ್.ಎಲ್–5 (1.9 ಮೆ.ವ್ಯಾ.)	3.1
12	ಟೆಕ್ಮೊ ಪ್ರಿಸಿಷನ್ ಕ್ಯಾಸ್ಟಿಂಗ್ಸ್	3.312
13	ಟೆಕ್ಮೊ ಇಂಡಸ್ಟ್ರೀಸ್	3.162
14	ಶಿಲ್ಪ ಮೆಡಿಕೇರ್ ಲಿಮಿಟೆಡ್–1	3.310
15	ಶಿಲ್ಪ ಮೆಡಿಕೇರ್ ಲಿಮಿಟೆಡ್–2 (ಶಿಲ್ಪ ಆ್ಯಂಟಿ ಬೈಯೋಟಿಕ್ಸ್ ಲಿಮಿಟೆಡ್)	3.310
16	ಪಟೇಲ್ ಶಾಂತಿ ಸ್ಟೀಲ್ಸ್ ಪ್ರೈ. ಲಿಮಿಟೆಡ್	3.31

1	2	3
17	ಕಮಲ್ ಟ್ರೇಡಿಂಗ್ ಕಂಪನಿ	3.312
18	ರಾಜಾ ಮ್ಯಾಗ್ನೆಟಿಕ್ ಲಿಮಿಟೆಡ್	3.310
19	ಪನಾಮ ಬ್ಯುಸಿನೆಸ್ ಸೆಂಟರ್	3.312
20	ಪನಾಮ ಕ್ರೆಡಿಟ್ ಕ್ಯಾಪಿಟಲ್	3.312
21	ಫ್ರೆಂಡ್ಸ್ ಅಸೋಸಿಯೇಟ್ ಪವರ್ ಪ್ರಾಜೆಕ್ಟ್	3.310
22	ಶಾರ್ಪ್ ಪಂಪ್ಸ್ ಪ್ರೈವೇಟ್ ಲಿಮಿಟೆಡ್	3.31
23	ರಜನೀಕಾಂತ್ ಫೌಂಡೇಶನ್	3.31
24	ವಿ.ಎಕ್ಸ್.ಎಲ್. ಸಿಸ್ಟಮ್ಸ್-1	3.31
25	ವಿ.ಎಕ್ಸ್.ಎಲ್. ಸಿಸ್ಟಮ್ಸ್-2	3.312
26	ಆರ್.ಎಸ್.ಎಂ. ಆಟೋ ಕ್ಯಾಸ್ಟ್ ಲಿಮಿಟೆಡ್	3.25
27	ಮೈಯೂರ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್	3.31
28	ಫಿಜಾ ಡಿವೆಲಪರ್ಸ್	3.312
29	ಸುತ್ತಟ್ಟಿ ಎಂಟರ್ ಪ್ರೈಸೆಸ್ ಪ್ರೈ. ಲಿಮಿಟೆಡ್	3.312
30	ಸಿದ್ದಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ ಲಿಮಿಟೆಡ್	3.312
31	ಗೋಯಟ್ಸ್ (1) ಫೈನಾನ್ಸಿಯಲ್	ಬ್ಯಾಕಿಂಗ್ ಮತ್ತು ಲೀಲಿಂಗ್
32	ಬಾಳಸಾಹೇಬ್ ಎಂ. ಲಟಕತ್	3.31
33	ಲೌಲಿ ಪ್ರಾಗ್ರನ್ಸೆಸ್	3.162
34	ಜಿ.ಎನ್. ಎನ್‌ವೆಸ್ಟ್‌ಮೆಂಟ್ಸ್	3.162
35	ಸಂಜಯ ಡಿ. ಗೋಡವತ್	3.1
36	ಗೋಡವತ್ ಪಾನಮಸಾಲ (ಕೆನೆಡ್ಲು)	3.162
37	ಗೋಡವತ್ ಪಾನ್ ಮಸಾಲ (ನಂದನಹೊಸೂರು)	3.162
38	ಜಿಂದಾಲ್ ಅಲ್ಯೂಮೀನಿಯಂ ಲಿಮಿಟೆಡ್, (ಎನಾರ್ ಕೋನ್)-1	3.162
39	ಜಿಂದಾಲ್ ಅಲ್ಯೂಮೀನಿಯಂ ಲಿಮಿಟೆಡ್, (2x0.950 ಮೆ.ವ್ಯಾ.)-2	3.162
40	ಮೊಹಿತೆ ಮತ್ತು ಮೊಹಿತೆ ಲಿಮಿಟೆಡ್	3.162
41	ಶ್ರೀರಾಮ್ ಸಿಟಿ ಯೂನಿಯನ್	3.162

1	2	3
42	ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್	3.162
43	ಶ್ರೀರಾಮ ಇನ್ವೆಸ್ಟ್‌ಮೆಂಟ್ ಲಿಮಿಟೆಡ್	3.162
44	ರಾಯಲ್ ಎನರ್ಜಿ ಕಂಪನಿ	3.1
45	ಸುಪ್ರೀಮ್ ಪವರ್ ಕಂಪನಿ	3.162
46	ಡಿಇಇ ಡಿಇಇ (ನಂದನಹೊಸೂರು)	3.1
47	ಡಿಇಇ ಡಿಇಇ (ಜೋಗಿಮಟ್ಟಿ)	ವಿದ್ಯುತ್ ಖರೀದಿ ಒಪ್ಪಂದ (ಪಿ.ಪಿ.ಎ) ಆಗಬೇಕಾಗಿರುತ್ತದೆ.
48	ಸವಿತ ಕೆಮಿಕಲ್ಸ್–33 ಕೆ.ವಿ.	3.312
49	ಸವಿತ ಕೆಮಿಕಲ್ಸ್–33 ಕೆ.ವಿ. (ಎನ್‌ಕಾನ್ ಗ್ರೂಪ್)	3.162
50	ಎನ್‌ಕಾನ್ ಸರ್ವಿಸೆಸ್ ಲಿಮಿಟೆಡ್	3.162
51	ಪ್ರಭಾತ್ ಅಗ್ರಿ ಬೈಯೋ ಟೆಕ್ನಿಕಲ್ ಲಿಮಿಟೆಡ್	3.16
52	ಪ್ರೈಮ್ ಲೇಬಲ್ ಪ್ರೈವೇಟ್ ಲಿಮಿಟೆಡ್	3.1
53	ಮಣಿಲಪಾಲ ಅಕ್ಯಾಡಮಿ	ವಿದ್ಯುತ್ ಖರೀದಿ ಒಪ್ಪಂದ (ಪಿ.ಪಿ.ಎ) ಆಗಬೇಕಾಗಿರುತ್ತದೆ.
54	ಇಂಡನ್ ಎನರ್ಜಿ ಪ್ರೈವೇಟ್ ಲಿಮಿಟೆಡ್	3.310
55	ಪಲ್ಲವಿ ಗ್ರೀನ್ ಪವರ್	3.162
56	ಎನ್‌ಇಜಿ ಮೈಕೋನ್ (1) ಪ್ರೈವೇಟ್ ಲಿಮಿಟೆಡ್	3.162
57	ಎಂಎಸ್‌ಪಿಎಲ್‌ಎಲ್‌ಪಿಹೆಚ್–1	3.312
58	ಎಂಎಸ್‌ಪಿಎಲ್‌ಎಲ್‌ಪಿಹೆಚ್–2	3.1
59	ಎಲ್‌ವೀಟಿ ಇಂಡಸ್ಟ್ರೀಸ್	3.310
60	ರಾಮಗಡ್ ಮಿನೆರಲ್ಸ್ ಮತ್ತು ಮೈನಿಂಗ್ ಲಿಮಿಟೆಡ್	3.1
61	ಮನ್‌ಸುಕ್‌ಮಲ್ ಇನ್‌ವೆಸ್ಟೆಮೆಂಟ್ಸ್ ಲಿಮಿಟೆಡ್	3.1
62	ಸೆಪ್ಕೋ ಇಂಡಸ್ಟ್ರೀಸ್ ಜಿ.ಎಂ. ಹಟ್ಟಿ.	3.1
63	ವಿ.ಎಕ್ಸ್ ಎಲ್ ಸಿಸ್ಟಮ್ಸ್–1	3.310
64	ಶ್ರದ್ಧಾ ಕನ್‌ಸ್ಟ್ರಕ್ಷನ್ ಇಂಜಿನಿಯರ್ಸ್	3.1
65	ಶ್ರೇಯ ಲಕ್ಷ್ಮಿ ಪ್ರಾಪರ್ಟೀಸ್	3.1

1	2	3
66	ಸ್ಟಾರ್ ಪ್ಲೈಡ್ ಫ್ಯಾಕ್ ಇಂಡಸ್ಟ್ರೀಸ್	3.1
67	ಗೋಡವತ್ ಪಾನ್‌ಮಸಾಲ–I	3.162
68	ಗುಡ್ ಲಕ್ ಸಿಂಡಿಕೇಟ್	3.1
69	ಅಶೋಷಿಯೇಟ್ ಆಟೋ ಟೆಕ್ಸ್ ಆ್ಯನ್ಸಿಲಿಯರೀಸ್	3.1
70	ಸಂಜಯ್ ಗೋದಾವತ್ (ಹೆಚ್‌ಯುಎಫ್)	3.1
71	ಚನ್ನಬಸಪ್ಪ ಅಂಡ್ ಸನ್ಸ್	3.1
72	ಜಿಂದಾಲ್ ಅಲ್ಯುಮೀನಿಯಂ ಲಿಮಿಟೆಡ್	3.162
73	ಜಿಂದಾಲ್ ಅಲ್ಯುಮೀನಿಯಂ ಲಿಮಿಟೆಡ್	3.162
74	ಎನಾರ್ಕಾನ್ ವಿಂಡ್ ಫರ್ಮ್ ಲಿಮಿಟೆಡ್	3.162
75	ಎನಾರ್ಕಾನ್ ವಿಂಡ್ ಫರ್ಮ್ ಲಿಮಿಟೆಡ್	3.162
76	ನುಜುವೀಡು ಸೀಡ್ಸ್ ಲಿಮಿಟೆಡ್–2	3.25
77	ಬಿ.ಎಸ್.ಇ.ಎಸ್.	3.310
78	ನುಜುವೀಡು ಸೀಡ್ಸ್ ಲಿಮಿಟೆಡ್–3	3.162
ಊ)	ಜೈವಿಕ ಅನಿಲ ಆಧಾರಿತ ವಿದ್ಯುತ್ ಯೋಜನೆಗಳು	
1	ಮಳವಳ್ಳಿ ಪವರ್ ಪ್ಲಾಂಟ್ ಲಿಮಿಟೆಡ್	3.32
2	ಸೌತ್ ಇಂಡಿಯ ಪೇಪರ್ ಮಿಲ್	3.32
3	ಭಾಗ್ಯನಗರ್ ಸಾಲ್ವೆಂಟ್ ಎಕ್ಸ್‌ಟ್ರಾಕ್ಷನ್ಸ್ ಪ್ರೈ. ಲಿಮಿಟೆಡ್	2.7
4	ಸ್ಯಾಮಸನ್ ಡಿಸ್ಟಿಲರೀಸ್ ಪ್ರೈ. ಲಿಮಿಟೆಡ್	2.8
5	ಆರ್.ಕೆ. ಪವರ್ ಜನರೇಷನ್ ಪ್ರೈವೇಟ್ ಲಿಮಿಟೆಡ್	2.8
ಊ)	ಇನ್‌ಫಾರ್ಮೇಶನ್ ಟೆಕ್ನಾಲಿಜಿ ಪಾರ್ಕ್ ಲಿಮಿಟೆಡ್., (ಡೀಸೆಲ್)	2.25

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ ಮಾನ್ಯ ಇಂಧನ ಸಚಿವರು ಉತ್ತರದಲ್ಲಿ ಯಾವ್ಯಾವ ವಲಯಗಳಲ್ಲಿ ಎಷ್ಟು ವಿದ್ಯುತ್ ಬಳಕೆಯಾಗುತ್ತಿದೆ ಎಂದು ಕೇಳಿದ್ದಕ್ಕೆ ಅತ್ಯಂತ ಹೆಚ್ಚಿನ ವಿದ್ಯುತ್ ಬಳಕೆ ಈ ರಾಜ್ಯದಲ್ಲಿ ಕೃಷಿಗೆ ಆಗುತ್ತದೆ, ಅಂದರೆ ಸುಮಾರು ಉತ್ಪಾದನೆ ಆಗಿದ್ದರ ಶೇಕಡ 50 ಪರ್ಸೆಂಟ್ ಕೃಷಿಗೆ ಬಳಕೆಯಾಗುತ್ತದೆ ಎಂದು ತೋರಿಸಿದ್ದಾರೆ. ಅಂದರೆ ಕೃಷಿಗೆ ಸುಮಾರು 10,879 ದಶಲಕ್ಷ ಯೂನಿಟ್, ಕೈಗಾರಿಕೆಗೆ 8,354 ದಶಲಕ್ಷ ಯೂನಿಟ್, ಗೃಹಬಳಕೆಗೆ ನಾಲ್ಕು ಸಾವಿರ ಅಂತ ಹೇಳಿದ್ದಾರೆ. ನನ್ನ ಪ್ರಕಾರ ವಿದ್ಯುತ್ ಉತ್ಪಾದಿಸಿ ಸರಬರಾಜು ಮಾಡುವ ನಮ್ಮ ಕಂಪನಿಗಳು ನಮ್ಮ ರಾಜ್ಯದಲ್ಲೂ ಅತ್ಯಂತ ಹೆಚ್ಚಿನ ಟ್ರಾನ್ಸ್‌ಮಿಷನ್, ಡಿಸ್ಟ್ರಿಬ್ಯೂಶನ್ ಲಾಸನ್ನು

ಕೃಷಿಕರ ಮೇಲೆ ಹಾಕಿ ಅಲ್ಲೇನು ದುರ್ವ್ಯವಹಾರ ನಡೆಯುತ್ತದೆ. ಅದನ್ನೆಲ್ಲಾ ಕೃಷಿಕರ ಮೇಲೆ ಹಾಕುತ್ತಾರೆ. ನಮ್ಮಲ್ಲಿ 15 ಲಕ್ಷ ಕೃಷಿ ಪಂಪಸೆಟ್ಟಿವೆ. ಅಷ್ಟಕ್ಕೆ 10879 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಬಳಕೆ ಆಗಲು ಸಾಧ್ಯವೇ ಇಲ್ಲ. ಅಲ್ಲಿ ನಡೆದಿರುವ ಭ್ರಷ್ಟಾಚಾರ, ಅಲ್ಲಿ ನಡೆಯುವ ಸೋರಿಕೆ ಇವನ್ನೆಲ್ಲ ಕೃಷಿಕರ ಮೇಲೆ ಇವರು ಹೇಳುತ್ತಾರೆ. ಅದಕ್ಕೇ ಎನರ್ಜಿ ಆಡಿಟನ್ನು ಯಾರ್ಯಾರು ಎಷ್ಟೆಷ್ಟು ಬಳಸುತ್ತಾರೆ ಎಂಬ ಬಗ್ಗೆ ಈ ಸರ್ಕಾರ ಮಾಡುವುದೇ? ಯಾವ ಆಧಾರದಲ್ಲಿ ಮಾಡುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇನ್ನು ಎರಡನೆಯದು, ಕೊರತೆ ಬೀಳುವ ವಿದ್ಯುತ್ತನ್ನು ಯಾವ ರೀತಿ ಉತ್ಪಾದಿಸುವಿರಿ ಎಂಬ ಪ್ರಶ್ನೆಗೆ ಒಂದು ಪಟ್ಟಿ ಕೊಟ್ಟಿದ್ದಾರೆ. ಅದರಲ್ಲಿ ಖಾಸಗಿ ವಲಯದಿಂದ ನಾಗಾರ್ಜುನ ಪವರ್ ಕಾರ್ಪೋರೇಷನ್ ಕಂಪೆನಿಯಿಂದ 1015 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿಸುತ್ತೇವೆಂದು ಹೇಳಿದ್ದೀರಿ. ಇದು ಸುಮಾರು 15–20 ವರ್ಷಗಳಾದ ಈ ನಾಗರಾರ್ಜುನ ಪವರ್ ಕಾರ್ಪೊರೇಷನದ್ದು ಹೇಳುತ್ತಾ ಬರುತ್ತಿದ್ದಾರೆ. ಅದಕ್ಕೇ ಇವ್ಯಾವುವೂ ಪ್ರಯೋಜನವಿಲ್ಲ. ಅದಕ್ಕೇ ನಿಗದಿತವಾಗಿ ಏನು ಉತ್ಪಾದನೆ ಮಾಡುತ್ತೀರಿ ಎನ್ನುವುದು ಹೇಳಬೇಕು ಮತ್ತು ಅದಕ್ಕಿಂತ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಜಲವಿದ್ಯುತ್ತಿನ ಉತ್ಪಾದನೆ, ಕಾವೇರಿ ನದಿಯಿಂದ ಸುಮಾರು 800 ಮೆಗಾವ್ಯಾಟ್ ಉತ್ಪಾದನೆಯಾಗಬೇಕು. ಶಿವನಸಮುದ್ರದಲ್ಲಿ 210 ಮೆಗಾವ್ಯಾಟ್ ಸಲುವಾಗಿ ಇವತ್ತಿನವರೆಗೂ ಮಾತುಕತೆ ಆಗಲಿಲ್ಲ. ಹೊಗೆನಿಕಲ್ ಮಾತುಕತೆ ಆಗಲಿಲ್ಲ, ಮೇಕೆದಾಟ್ ಬಗ್ಗೆ ಇದರಲ್ಲಿ ಪ್ರಸ್ತಾಪಿಸಲೇ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎನರ್ಜಿ ಆಡಿಟ್ ಮಾಡುತ್ತೀರಾ ಅಂತ ಕೇಳಿದ್ದಾರೆ. ಎನರ್ಜಿ ಆಡಿಟ್ ಮಾಡುಸುತ್ತಿದ್ದೇವೆ ಮತ್ತು ಅದರ ಜೊತೆಗೆ ಸೋರಿಹೋಗುವುದನ್ನೆಲ್ಲಾ ಕೃಷಿಕರ ಬಳಕೆಗೆ ಸೇರಿಸಲಾಗುತ್ತಿದೆ ಎಂಬ ಗಂಭೀರ ಆಪಾದನೆ ಮಾಡಿದ್ದಾರೆ, ಆ ಉದ್ದೆಶದಿಂದಲೇ ಈ ಸರ್ಕಾರ ಬಂದ ಮೇಲೆ ಒಂದು ದಿಟ್ಟ ನಿಲುವನ್ನು ಕೈಗೊಂಡಿದ್ದೇವೆ. ಏಕೆಂದರೆ ಭಾಗ್ಯ ಜ್ಯೋತಿ ಇರಬಹುದು 18 ಯೂನಿಟ್ ಫ್ರೀ ಮಾಡಿ ಬಾಕಿಯದಕ್ಕೆ ಮೀಟರ್ ಹಾಕಿ ಎಷ್ಟು ಬರುತ್ತದೆ ಅಂತ ತಿಳಿಯಬಹುದು. ಅದೇ ರೀತಿ ಐಪಿ ಸೆಟ್‌ಗೂ ಅಷ್ಟೇ ಇವತ್ತು 1 ಲಕ್ಷ 35 ಸಾವಿರ ಐಪಿ ಸೆಟ್‌ಗಳನ್ನೂ ಕನ್‌ಫರ್ಮೇಶನ್ ಎಂದು ಮಾಡಿ ರಾಜ್ಯದಲ್ಲಿ ಅವುಗಳಿಗೆಲ್ಲಾ ಮೀಟರ್ ಹಾಕಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಆಗ ಯಾರ ಕಡೆಯಿಂದ ಪೋಲು ಆಗುತ್ತಿದೆ ಎಂದು ಅದನ್ನೂ ತಿಳಿಯಬಹುದು. ಅದಲ್ಲದೆ ನಾವು ಕೆಲವು ಯೋಜನೆಗಳನ್ನು ಈಗಾಗಲೇ ಕೈಗೆತ್ತಿಕೊಂಡಿದ್ದೇವೆ. ಆ ಕೆಲವು ಯೋಜನೆಗಳು ಯಾವುವು ಅಂತ ಬಸವರಾಜ ರಾಯರೆಡ್ಡಿಯವರಿಗೂ ಗೊತ್ತಿದೆ. ಆದರೆ ನಮ್ಮ ಸರ್ಕಾರದಿಂದ ಮುಂದಿನ ದಿನಗಳಲ್ಲಿ ಏನು ಮಾಡಬೇಕು ಅಂತ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ತಮ್ಮ ಸಹಕಾರವೂ ಇರಲಿ. ನಾವು ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟು 2007ರ ವೇಳೆಗೆ ಸಾಕಷ್ಟು ವಿದ್ಯುತ್ ಉತ್ಪಾದಿಸುವ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ಬಹಳ ವೇಳೆ ತೆಗೆದುಕೊಂಡಿದ್ದೀರಿ. ಉಪ ಪ್ರಶ್ನೆಗೆ ಅವಕಾಶ ಇಲ್ಲ. ಇನ್ನು ನಾಲ್ಕು ಪ್ರಶ್ನೆಗಳಿವೆ.

ಶ್ರೀ ಬಸವರಾಜ ರಾಯರೆಡ್ಡಿ: ಬಹಳ ಮುಖ್ಯವಾದ ವಿಷಯ ಇದೆ.

ಅಧ್ಯಕ್ಷರು: ಮುಖ್ಯವಾದದ್ದು ಅಂದರೆ ಬೇರೆ ನಿಯಮದ ಅಡಿಯಲ್ಲಿ ಕಳಿಸಿ. ತಾವು ಹಿರಿಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಒಂದು ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸಬೇಕಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ: ನಾನು ತಮ್ಮ ಆಜ್ಞೆಯನ್ನು ಪಾಲಿಸುತ್ತೇನೆ. ದಯಮಾಡಿ ಒಂದು ಉಪ ಪ್ರಶ್ನೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಬೇಗ ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ ಖಾಸಗಿ ಕಂಪೆನಿಯಿಂದ ಏನು ವಿದ್ಯುತ್ ಉತ್ಪಾದನೆಯಾಗುತ್ತದೆ, ಯಾವ್ಯಾವ ದರದಲ್ಲಿ ಖರೀದಿ ಮಾಡುವಿರಿ ಎಂದು ಕೇಳಿದ್ದಕ್ಕೆ ನಮ್ಮಲ್ಲಿ ಹಲವಾರು ರೀತಿಯಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಅದರಲ್ಲಿ ಶುಗರ್ ಇಂಡಸ್ಟ್ರಿಯಿಂದ ಉತ್ಪಾದನೆಯಾಗುವ ವಿದ್ಯುತ್‌ಗೆ ಒಂದೇ ರೇಟ್ ಕೊಡಬೇಕಾಗಿತ್ತು. ಆದರೆ ಕೆಲವು ಕಂಪೆನಿಗೆ 3 ರೂ. 32 ಪೈಸೆ ಮಾಡಿದಿರಿ, ಕೆಲವು ಕಂಪೆನಿಗೆ 2 ರೂ.80 ಪೈಸೆಗೆ ಯೂನಿಟನ್ನು ದರ ನಿಗದಿ ಮಾಡಿ ಕೊಂಡಿದ್ದೀರಿ. ಏಕೆ ಈ ತರಹ ಮಾಡಿಕೊಂಡಿದ್ದೀರಿ? ಇದು ಗೊತ್ತಾಗಬೇಕು. ಏಕೆಂದರೆ ಒಂದೇ ತರಹದ ಷುಗರ್ ಇಂಡಸ್ಟ್ರಿಯಿಂದ ಅದು ಬರುವಂಥದ್ದು ಮತ್ತು ಅದರ ಜೊತೆಗೆ ಜಲ ವಿದ್ಯುತ್ ಮತ್ತು ಗಾಳಿ ವಿದ್ಯುತ್ ಏನು ಇದೆ, ಇದಕ್ಕೆ ರಿಕರಿಂಗ್ ಎಕ್ಸ್‌ಪೆಂಡಿಚರ್ ಇಲ್ಲ. ಇದಕ್ಕೆ ಬಹಳ ಅತಿ ಹೆಚ್ಚು ದರಲ್ಲಿ ಯೂನಿಟ್ ರೂಪಾಯಿಗಳಲ್ಲಿ ವಿದ್ಯುತ್ ಖರೀದಿಯಾಗುತ್ತದೆ, ಅದಕ್ಕೆ ಯಾವ ಮಾನದಂಡದ ಮೇಲೆ ಇದನ್ನು ತಾವು ಖರೀದಿ ಮಾಡಿಕೊಂಡಿದ್ದೀರಿ ಎಂದು ತಿಳಿಸಬೇಕು. ಇನ್ನು ಮೂರನೆಯದಾಗಿ ತಣ್ಣೀರು ಬಾವಿ, ಟಾಟಾ ಕಂಪನಿ, ರಾಯಲ್ ಸೀಮಾ ಮತ್ತು ಜಿಂದಾಲ್, ಇಲ್ಲಿ ತಾವು ಅತೀ ಹೆಚ್ಚಿನ ರೇಟ್‌ನಲ್ಲಿ ತಾವು ಖರೀದಿ ಮಾಡುತ್ತೀರಿ.

ಅಧ್ಯಕ್ಷರು: ರಾಯರೆಡ್ಡಿಯವರೇ, ಬಜೆಟ್ ಭಾಷಣದ ಮೇಲೆ ಇವೆಲ್ಲಾ ಮಾತನಾಡುವುದಕ್ಕೆ ಅವಕಾಶಗಳು ಇದೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ನಾನು ಏಕೆ ಹೇಳಿದೆ ಎಂದರೆ ಇದರಲ್ಲಿ ಬಹಳಷ್ಟು ವ್ಯವಹಾರ ನಡೆದಿರುತ್ತದೆ. ಇದು ಏತಕ್ಕೆ ಆಯಿತು ಎಂದು ನನಗೆ ಗೊತ್ತಾಗಬೇಕಾಗಿದೆ ಅಷ್ಟೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ವ್ಯವಹಾರ ನಡೆದಿದೆ ಎಂದು ಹೇಳಿದರು. ಯಾವ ತರಹದ ವ್ಯವಹಾರ ನಡೆದಿದೆ ಎಂದು ಹೇಳಿದರೆ ಅದನ್ನು ಬೇಕಾದರೆ ಚರ್ಚೆ ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಆಯಿತು ಮುಂದಕ್ಕೆ ಹೋಗೋಣ.

ಶ್ರೀ ಕೆ.ಆರ್. ರಮೇಶ್ ಕುಮಾರ್: ವೇರಿಯೇಷನ್ ಇದೆ ಎಂದು ಮಾನ್ಯ ಸದಸ್ಯರು ಹೇಳಿದರು.

ಶ್ರೀ ಬಸವರಾಜ ರಾಯರೆಡ್ಡಿ: ನೀವು ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ. ಅಥವಾ ಈ ಸರ್ಕಾರ ಮಾಡಿದೆ ಎಂದು ಹೇಳಲಿಲ್ಲ. ಏಕೆ ನಡೆದಿದೆ? ಅಧಿಕಾರಿ ಮಟ್ಟದಲ್ಲಿ ನಡೆದಿದೆಯೇ? ಇದರ ಬಗ್ಗೆ ತನಿಖೆಯಾಗಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಅವರು ಒಂದು ಸೀರಿಯಸ್ ಛಾರ್ಜನ್ನು ಮಾಡಿದ್ದಾರೆ. ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ ವೇರಿಯೇಷನ್ ಇದೆ, ಒಬ್ಬೊಬ್ಬರಿಗೆ ಒಂದೊಂದು ರೇಟನ್ನು ನಿಗದಿ ಮಾಡಿದ್ದೀರಿ, ಹೀಗೆ ಮಾಡಬೇಕಾದರೆ ಏನೋ ವ್ಯವಹಾರ ನಡೆದಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ ವೇರಿಯೇಷನ್ ಇದೆಯಾ ಇಲ್ಲವಾ? ಇದ್ದರೆ ಮತ್ತು ಏನೂ ವ್ಯವಹಾರ ಇಲ್ಲದಿದ್ದರೆ ವೇರಿಯೇಷನ್ ಏಕೆ ಬಂತು? ಅದನ್ನು ಹೇಳಿ ವ್ಯವಹಾರ ಇದೆ ಎಂದು ನಾವೂ ಹೇಳುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ನಾನು ಬಂದ ಮೇಲೆ ಯಾವುದಾದರೂ ಅಂಥ ಪ್ರಕರಣಗಳೇನಾದರೂ ಇದ್ದರೆ ದಯಮಾಡಿ ಅದನ್ನು ಸದನದ ಮುಂದೆ ಇಡಲಿ. ಹಿಂದಿನದು ಬೇಕಾದರೆ ಪ್ರತ್ಯೇಕವಾಗಿ ಚರ್ಚೆ ಮಾಡುವುದಾದರೆ ನಾನು ಚರ್ಚೆಗೆ ರೆಡಿ ಇದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ವೇರಿಯೇಷನ್ ಇದೆಯಾ ಇಲ್ಲವಾ? ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ ವೇರಿಯೇಷನ್ ಇದೆಯಾ ಇಲ್ಲವಾ? ಒಬ್ಬರ ಹತ್ತಿರ ಖರೀದಿ ಮಾಡುವುದಕ್ಕೆ ಮತ್ತೊಬ್ಬರ ಹತ್ತಿರ ಖರೀದಿ ಮಾಡುವುದಕ್ಕೆ ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ ವೇರಿಯೇಷನ್ ಇದೆಯಾ ಇಲ್ಲವಾ?

ಅಧ್ಯಕ್ಷರು: ನಾನು ಭೀಮಪ್ಪ ಚನ್ನಪ್ಪ ಅವರನ್ನು ಕರೆದಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಹಿಂದಿನ ದಿನಗಳಲ್ಲಿ ವೇರಿಯೇಷನನ್ನು ಮಾಡಿದ್ದಾರೋ ಬಿಟ್ಟಿದ್ದಾರೋ ಎಂದು ನಾನು ಹಿಂದಿನಿಂದ ಚೆಕ್ ಮಾಡುತ್ತಾ ಕುಳಿತುಕೊಳ್ಳಲಾ?

ರಾಯಭಾಗ ಕ್ಷೇತ್ರದ ರಸ್ತೆಗಳ ದುರಸ್ತಿ

207 (1808) ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ (ರಾಯಭಾಗ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಭಾಗ ಕ್ಷೇತ್ರದಲ್ಲಿ ಬರುವ ರಾಜ್ಯ ಹೆದ್ದಾರಿಗಳು ಸಂಚಾರಕ್ಕೆ ಬಾರದಷ್ಟು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: